ತಡೆ ಹಿಡಿಯಲಾದ ಪ್ರಶ್ನೆಗಳು

ಅರಗು ಮತ್ತು ಬಣ್ಣದ ಕೈಗಾರಿಕಾ ತರಬೇತಿ ಕೇಂದ್ರದ ಸ್ಥಳಾಂತರ

17 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು. ಈ ಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚನ್ನಪಟ್ಟಣ ಕೇಂದ್ರ ಸ್ವಾಮ್ಯದ ಅರಗು ಮತ್ತು ಬಣ್ಣದ ಕೈಗಾರಿಕಾ ತರಬೇತಿ ಕೇಂದ್ರವನ್ನು ತಮಿಳುನಾಡಿಗೆ ಸ್ಥಳಾಂತರಿಸಲು ಕೇಂದ್ರ ಸರ್ಕಾರಿ ನಿರ್ಧರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಹೌದು. ಆದರೆ ಹೊಂಗನೂರಿನಲ್ಲಿರುವ ಕೇಂದ್ರಸ್ವಾಮ್ಯದ ಅರಗು ಮತ್ತು ಬಣ್ಣದ ಕೈಗಾರಿಕಾ ತರಬೇತಿ ಕೇಂದ್ರವನ್ನು ತಮಿಳುನಾಡಿಗೆ ಸ್ಥಳಾಂತರಿಸುವ ವಿಷಯವನ್ನು ಕೈಬಿಡಲಾಗಿದೆ.

ಆ) (ಅ) ಕ್ಕೆ ಉತ್ತರಿಸಿರುವುದರಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಶ್ರೀ ಎಸ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, ಚನ್ನಪಟ್ಟಣದ ಎಲೆಕೇರಿ ಎಂಬ ಸ್ಥಳದಲ್ಲಿ ಇದ್ದಂಥ ಒಂದು ಸಣ್ಣ ಕೈಗಾರಿಕೆಯನ್ನು ತಮಿಳುನಾಡಿಗೆ ಶಿಫ್ಟ ಮಾಡಿದ್ದಾರೆ, ಅಲ್ಲಿರತಕ್ಕಂಥ ಯುವಕರಿಗೆ ಇದರಿಂದಾಗಿ ಕೆಲಸವಿಲ್ಲದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಮತ್ತೆ ಇದಕ್ಕೆ ಕೈ ಹಾಕಿದರು, ಮತ್ತೆ ಇದಕ್ಕೆ ಕ್ರಮವನ್ನು ತೆಗೆದುಕೊಂಡು ಇದನ್ನು ರೀಟೇನ್ ಮಾಡುತ್ತೀರಿ, ಇದನ್ನು ಯಾವಾಗ ಮಾಡುತ್ತೀರಿ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಇದನ್ನು ರೀಟೇನ್ ಮಾಡುತ್ತೇವೆಂದು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಅಲ್ಲಿ ಇನ್ನೊಂದು ಘಟನಾಗಿದೆಯೆಂದರೆ 5 ಸಾವಿರ ಕುಟುಂಬಗಳು ಈ ಕಾರ್ಖಾನೆಯಿಂದ ಜೀವನ ಮಾಡುತ್ತಿದ್ದಾರೆ. ಈ ಕಾರ್ಖಾನೆಯಿಂದ ಜೀವನ ಮಾಡುತ್ತಿರತಕ್ಕಂಥ ಈ ಜನರಿಗೆ ಕಾರ್ಖಾನೆಯ ಪರಿಸರದಲ್ಲೇ ಬೆಳೆದಿರುವ 'ಅಲೇಮರ' ಎಂಬ ಮರದಿಂದ ಆ ಕುಟುಂಬಗಳಿಗೆ ಅನುಕೂಲವಾಗುತ್ತಿದ್ದ ಯಾವುದೇ ಕಾರಣಗಳಿಂದ ಈ ಕಾರ್ಖಾನೆಯನ್ನು ಶಿಫ್ಟ ಮಾಡಬಾರದು, ಅದು ಅಲ್ಲೇ ಇರಬೇಕೆಂದು ಸರ್ಕಾರಕ್ಕೆ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಬಹಳ ಸ್ಪಷ್ಟವಾದಂಥ ಉತ್ತರವನ್ನು ಕೊಟ್ಟಿದ್ದೇನೆ. ಯಾವುದೇ ಕಾರಣದಿಂದ ಆ ಕಾರ್ಖಾನೆಯನ್ನು ಶಿಫ್ಟ ಮಾಡುವುದಿಲ್ಲ ಈಬಗ್ಗೆ ಈಗಾಗಲೇ ಕೇಂದ್ರ ಸರ್ಕಾರದಿಂದ ಈ ಬಗ್ಗೆ ಪತ್ರ ಬಂದಿದೆ. ಆದಕಾರಣ ಮಾನ್ಯ ಸದಸ್ಯರು ಈ ಬಗ್ಗೆ ಚಿಂತನೆ ಮಾಡಬೇಕಾದ ಅವಶ್ಯಕತೆಯಿಲ್ಲ.

ಅಧ್ಯಕ್ಷರು : ವಾಟಾಳ್ ನಾಗರಾಜರವರೇ, ನಿಮ್ಮ ಪ್ರಶ್ನೆ ಸಂಖ್ಯೆ 18(45)ಕ್ಕೆ ಉತ್ತರ ಹೇಳಲು ಸ್ವಲ್ಪ ಕಾಲ ಕೇಳಿದ್ದಾರೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಹಿಂದೆಯೂ ಇದೇ ಪ್ರಶ್ನೆ ಕೇಳಿದ್ದೇನೆ. ಬಹು ರಾಷ್ಟ್ರೀಯ ಕಂಪನಿಗಳು ಎಷ್ಟು ಕರ್ನಾಟಕ ರಾಜ್ಯಕ್ಕೆ ಬಂದಿವೆ? ಆ ಷರತ್ತುಗಳೇನು? ಯಾವ ಯಾವ ಕಂಪನಿಗಳು ಬಂದಿವೆ ಎಂಬುದು ಬಹಳ ಪ್ರಾಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು : ಪ್ರಶ್ನೆ ಬಹಳ ರಾಷ್ಟ್ರಗಳಿಗೆ ಸಂಬಂಧಪಟ್ಟಿರುವುದರಿಂದ ಬಹಳ ಸಮಯ ಬೇಕಾಗುತ್ತದೆ, ಉತ್ತರ ತರಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಬಹು ರಾಷ್ಟ್ರೀಯ ಕಂಪನಿಗಳ ಜೊತೆ ಇವರು ಒಪ್ಪಂದ ಮಾಡಿಕೊಳ್ಳುವುದಕ್ಕೆ ಅವಕಾಶ, ಇರುತ್ತದೆ, ಅವರನ್ನು ಕರೆದು ಸಮಾರಂಭ ಮಾಡುವುದಕ್ಕೆ ಅವಕಾಶ ಇರುತ್ತದೆ, ಅವರ ಜೊತೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಇರುತ್ತದೆ, ಆದರೆ ಅವರು ಯಾರು ಯಾರು ಎಂದು ಹೇಳುವುದಕ್ಕೆ ಅವಕಾಶ ಇಲ್ಲವೇ ಸ್ವಾಮಿ.

ಅಧ್ಯಕ್ಷರು : ನೀವು ಕೇಳಿರುವುದು ಬಹು ರಾಷ್ಟ್ರೀಯ ಕಂಪನಿಗಳ ಬ್ಗಗೆಯಾದ್ದರಿಂದ ಅದಕ್ಕೆ ಉತ್ತರ ಕೊಡಲು ಸಮಯ ಬೇಕಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಅವರು ಕೇಳಿರುವ ಪ್ರಶ್ನೆ ಬಹಳ ಮಹತ್ವದ್ದು ಆಗಿದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಉತ್ತರವನ್ನು ಸದಸ್ಯರು ನಿಜವಾಗಿಯೂ ಇಲ್ಲೇ ಅಪೇಕ್ಷೆ ಪಡುತ್ತಾರೆ. ಆದರೆ ಇಲ್ಲೇನಾಗಿದೆ ಎಂದರೆ, ಅವರು ಕೇಳಿರುವುದು ಬಹು ರಾಷ್ಟ್ರೀಯ ಕಂಪನಿಗಳ ಜೊತೆಯಲ್ಲಿ ಒಪ್ಪಂದವನ್ನು ಎಲ್ಲೆಲ್ಲಿ ಮಾಡಿಕೊಂಡಿದ್ದೀರಿ ಎಂದು, ಆದರೆ ಈ ಒಪ್ಪಂದ ಕೇವಲ ಕೈಗಾರಿಕಾ ಇಲಾಖೆಯಿಂದ ಮಾತ್ರ ಆಗಿಲ್ಲ, ಲೋಕೋಪಯೋಗಿ ಇಲಾಖೆಯ ಜೊತೆ ಆಗಿದೆ, ಪ್ರವಾಸೋದ್ಯಮ ಇಲಾಖೆಯ ಜೊತೆ ಆಗಿದೆ. ಕೃಷಿ ಇಲಾಖೆಯ ಜೊತೆ ಆಗಿದೆ, ಕೈಗಾರಿಕಾ ಇಲಾಖೆಯ ಜೊತೆ ಒಟ್ಟು ಈ ನಾಲ್ಕು ಇಲಾಖೆಗಳಿಂದ ಮಾಹಿತಿಯನ್ನು ಪಡೆದು ನಾನು ನಿಮಗೆ ಉತ್ತರ ಕೊಡಬೇಕಾಗಿದೆ. ದಯವಿಟ್ಟು ಇದಕ್ಕಾಗಿ ಸಹಕರಿಸಿ, ನಿಮಗೆ ಸಮಾಧಾನವಾಗುವ ಹಾಗೆ ನಾನು ಉತ್ತರ ಕೊಡಬೇಕಲ್ಲ! ವಾಟಾಳ್‌ರವರೇ ದಯಮಾಡಿ ಸಹಕರಿಸಿ.

ಅಧ್ಯಕ್ಷರು : ವಾಟಾಳರವರು ಸಹಕರಿಸುತ್ತಾರೆ ಬಿಡಿ ಏಕೆಂದರೆ ಅವರು ಹಳೇ ಸದಸ್ಯರು ಕೂಡ, ಮುಂದಿನ ಪ್ರಶ್ನೆ ಡಾ|| ಯು. ಚಿತ್ತರಂಜನ್.

ಶ್ರೀ ವಾಟಾಳ್ ನಾಗರಾಜ್ : ದಯಮಾಡಿ ಉತ್ತರ ಹೇಳಬೇಕು, ಏಕೆಂದರೆ ಇದರಲ್ಲಿ ವೈಯಕ್ತಿಕವಾಗಿ ನನ್ನದೇನೂ ಇಲ್ಲ, ಇದು ಬಹಳ ಪ್ರಾಮುಖ್ಯವಾಗಿರತಕ್ಕಂಥ ವಿಷಯ, ಈಗಾಗಲೇ ನೀವು ನನಗೆ ಸಹಕರಿಸುತ್ತಾರೆ ಎಂದು ಹೇಳಿದ ಮೇಲೆ ನೆಗೆದುಬಿದ್ದುಹೋಯಿತು ನಮ್ಮ ಕಥೆ, ನಮ್ಮ ಇಡೀ ಶಕ್ತಿಯನ್ನೇ ಅರ್ಧ ಹಾಳು ಮಾಡಿಬಿಟ್ಟಿರಿ ನೀವು, ಇವೊತ್ತು ದೇಶಪಾಂಡೆ ಮೇಲೆ ಬಹಳ ಯುದ್ಧ ಮಾಡಬೇಕು ಎನ್ನುವ ಮನಸ್ಸಿದೆ ನನಗೆ, ಆದರೆ ನೀವು ಸಹಕರಿಸುತ್ತಾರೆ ಎಂದ ತಕ್ಷಣ ನಾನು ಆ ಎಲ್ಲಾ ರೀತಿಯ ಯುದ್ಧವನ್ನು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಮೊನ್ನೆ ಮಾನ್ಯ ಸದಸ್ಯರೊಬ್ಬರು ಇದರ ಬಗ್ಗೆ ಪ್ರಸ್ತಾವ ಮಾಡುವಾಗ ಬಹು ರಾಷ್ಟ್ರೀಯ ಕಂಪನಿಗಳನ್ನು ನಾವು ಯಾವುದೇ ಕಾರಣದಿಂದ ರಕ್ಷಣೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರಲ್ಲಾ, ಅಂದಮೇಲೆ ಒಪ್ಪಂದಗಳ ಬಗ್ಗೆ ಏಕೆ ಇವರಿಗೆ ಗೊತ್ತಿರುವುದಿಲ್ಲ?

ಅಧ್ಯಕ್ಷರು : ಇದು ಪ್ರಶ್ನೋತ್ತರ ಅವಧಿ, ನಾನು ಈಗಾಗಲೇ ಮುಂದಿನ ಪ್ರಶ್ನೆ ಕರೆದಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನಗೆ ಗೊತ್ತಾಗಬೇಕಲ್ಲ ಅಧ್ಯಕ್ಷರೇ, ಒಪ್ಪಂದಗಳ ಬಗ್ಗೆ ಇವರಿಗೆ ಗೊತ್ತಿಲ್ಲ ಅಂದರೆ ಹೇಗೆ, ಇವರಿಗೆ ಅವರನ್ನು ರಕ್ಷಣೆ ಮಾಡುವುದಕ್ಕೆ ಗೊತ್ತು ಆದರೆ ಒಪ್ಪಂದಗಳ ಬಗ್ಗೆ ಇವರಿಗೆ ಗೊತ್ತಾಗುವುದಿಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಾವು ಒಂದು ಭರವಸೆಯನ್ನು ನಮಗೆ ಕೊಡಬೇಕು, ಬಹು ರಾಷ್ಟ್ರೀಯ ಕಂಪನಿಗಳ ಬಗ್ಗೆ ಯಾವುದೇ ಪ್ರಶ್ನೆಯನ್ನು ಕೇಳಿದಾಗಲೂ ಈ ಸದನದಲ್ಲಿ ಇದುವರೆಗೆ ಉತ್ತರ ಕೊಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ನಿಂತು ಹೇಳಿದರು, ಇನ್ನೊಂದು ತಿಂಗಳಲ್ಲಿ ಅವೆಲ್ಲವೂ ಕಾರ್ಯರೂಪಕ್ಕೆ ಬರದೇ ಹೋದರೆ ಅವುಗಳನ್ನು ಕ್ಯಾನ್ಸಲ್ ಮಾಡುತ್ತೇವೆ ಎಂದು. ಆದರೆ ಅದರ ಬಗ್ಗೆ ಅಲ್ಲಿ ಏನು ನಡೆಯುತ್ತಿದೆ, ಸರ್ಟಿಫಿಕೇಟಗೆ ಸಹಿ ಮಾಡುವುದ,ಜಾಸ್ತಿ ಮಾಡುವುದು, ಕಡಿಮೆ ಮಾಡುವುದು, ಇದು ನಿಮ್ಮ ಮನೆ ವ್ಯವಹಾರವಲ್ಲ. ಅಧ್ಯಕ್ಷರೇ, ನಾವು ಕೇಳಿದಾಗ ಮಾಹಿತಿಗಳನ್ನು ಕೊಡದೇ ಇದ್ದರೆ ನಾವು ಈ ಸದನದಲ್ಲಿ ಕೆಲಸ ಮಾಡುವುದು ಹೇಗೆ? ನೀವು ಯಾವ ಕಂಪನಿಗಳ ಜೊತೆಗೆ ಸಹಿ ಮಾಡಿದ್ದೀರಿ ಎಂದು ವಿವರವನ್ನು ಕೇಳಿದರೆ ಸಮಯ ಏಕೆ ತೆಗೆದುಕೊಳ್ಳುತ್ತೀರಿ? ನಮಗೆ ಇದರ ಗುಟ್ಟೇನು ಎಂಬುದು ಅರ್ಥವಾಗುತ್ತಿಲ್ಲ. ಇವೊತ್ತು ಸರ್ಕಾರದ ನಡವಳಿಕೆಯ ಬಗ್ಗೆ ಜನರು ಸಂಶಯ ಪಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆಯೆಂದು ಹೇಳಲು ಇಚ್ಛೆಪಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ವಿರೋಧ ಪಕ್ಷದ ನಾಯಕರು ಯಾವುದೇ ವಿವರದ ಬಗ್ಗೆ ಸಂಶಯ ಪಡುವಂಥ ಅವಶ್ಯಕತೆಇಲ್ಲ. ಯಾವುದನ್ನೂ ಗುಟ್ಟಾಗಿ ಇಡಬೇಕಾದ ಅವಶ್ಯಕತೆ ನಮಗಿಲ್ಲ. ಅಧ್ಯಕ್ಷರು ಅನುಮತಿ ಕೊಟ್ಟರೆ ಬೇಕಾದರೆ ಎಲ್ಲಾ ಕಾಗದ ಪತ್ರಗಳನ್ನು ಈ ಸಂಬಂಧ ಸಭೆಯ ಮುಂದೆ ಇಡುತ್ತೇನೆ. ನನಗೇನೂ ಈ ಬಗ್ಗೆ ಗುಟ್ಟಿಲ್ಲ, ನಾನು ಇಷ್ಟು ಮಾತ್ರ ಹೇಳುತ್ತೇನೆ, ಇದರಲ್ಲಿ ಲೋಕೋಪಯೋಗಿ ಇಲಾಖೆ, ಕೃಷಿ ಇಲಾಖೆ, ಕೈಗಾರಿಕಾ ಇಲಾಖೆ, ಪ್ರವಾಸೋದ್ಯಮ ಇಲಾಖೆ ಇತ್ಯಾದಿ ಐದಾರು ಇಲಾಖೆಗಳೊಂದಿಗೆ ಒಪ್ಪಂದ ಆಗಿರುವುದರಿಂದ ಇವೆಲ್ಲವುಗಳಿಂದ ಮಾಹಿತಿಯನ್ನು ತರಿಸಿ ಉತ್ತರ ಕೊಡಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದವರ ಮೇಲೆ ನನ್ನದು ನೇರವಾದ ಆಪಾದನೆ ಇದೆ. ಸರ್ಕಾರ ಇದನ್ನು ಮುಚ್ಚಿಡತಕ್ಕಂಥ ತಂತ್ರವನ್ನು ಮಾಡುತ್ತಿದ್ದಾರೆ. ಈ ಸದನವನ್ನು ಕಡೆಗಾಣಿಸಲಿದ್ದಾರೆ, ಈ ಸದನದ ಮುಂದೆ ಎಲ್ಲಾ ಷರತ್ತುಗಳನ್ನು ಇಷ್ಟು ಹೊತ್ತಿಗೆ ಮಂಡಿಸಬೇಕಾಗಿತ್ತು. ಈ ಸದನಕ್ಕೆ ಗೊತ್ತಿಲ್ಲದೇ, ಈ ರಾಜ್ಯಕ್ಕೆ ಗೊತ್ತಿಲ್ಲದೇ ಇವರು ಎಷ್ಟು ಬಹು ರಾಷ್ಟ್ರೀಯ ಕಂಪನಿಗಳ ಜೊತೆಯಲ್ಲಿ

ಹೊಂದಾಣಿಕೆ ಮಾಡಿಕೊಂಡಿದ್ದಾರೆ, ಅದರ ಷರತ್ತುಗಳೇನು, ನಮ್ಮ ಪರಿಸ್ಥಿತಿ ಏನು, ಕರ್ನಾಟಕದ ಜನ ದೇಶದ ಜನ ಎಷ್ಟು ಪಾತಾಳಕ್ಕೆ ಹೋಗುತ್ತಾರೆ ಇವೆಲ್ಲವೂ ಕೂಡ ಗೊತ್ತಾಗಬೇಕಾಗುತ್ತದೆ. ಆದ್ದರಿಂದ ಸರ್ಕಾರದ ನೀತಿಯ ಮತ್ತು ಇವರು ಬಹು ರಾಷ್ಟ್ರೀಯ ಕಂಪನಿಗಳ ಜೊತೆ ಮಾಡಿಕೊಂಡಿರುವ ನೀತಿಯನ್ನು ವಿರೋಧಿಸಿ ಮತ್ತು ಇದರ ಬಗ್ಗೆ ಸರ್ಕಾರ ಪ್ರಾಮಾಣಿಕವಾದ ಉತ್ತರವನ್ನು ಕೊಡುವುದಕ್ಕೆ ಆಗಲಿಲ್ಲವೆಂದು ಹೇಳಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಇದು ಬಹಳ ನೋವಿನ ಪ್ರಸಂಗ ಇದು ಒಳ್ಳೆಯದಲ್ಲ.

(ಈ ಹಂತದಲ್ಲಿ ಸರ್ಕಾರದ ನೀತಿಯನ್ನು ವಿರೋಧಿಸಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗವನ್ನು ಮಾಡಿದರು)

ದ.ಕನ್ನಡ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ.

26 - ಡಾ|| ಚಿತ್ತರಂಜನ್ (ಭಟ್ಕಳ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡ ಜಿಲ್ಲೆಯಲ್ಲಿ 1995-96ರ ಸಾಲಿನಲ್ಲಿ ಭಾರೀ ಮತ್ತು ಮಧ್ಯಮ ಕೈಗಾರಿಕಾ ಘಟಕ ಸ್ಥಾಪಿಸಲಾಗಿದೆಯೇ ಹಾಗಿದ್ದರೆ ವಿವರ ನೀಡುವುದು!*

ಆ) *ಹಾಗಿಲ್ಲದಿದ್ದಲ್ಲಿ 1995-96ರ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಯೋಜನೆ ಇದೆಯೇ?*

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಇಲ್ಲ

ಆ) ಸಿಂಗಲ್ ವಿಂಡೋ ಏಜೆನ್ಸಿ ಮತ್ತು ಉನ್ನತ ಮಟ್ಟದ ಸಮಿತಿಯು ಕೆಲವು ಪ್ರಸ್ತಾವನೆಗಳನ್ನು ಅನುಮೋದಿಸಿದ್ದು ಈ ಯೋಜನೆಗಳ ಕಾರ್ಯಾರಂಭ 1996-97ರಲ್ಲಿ ಪ್ರಾರಂಭವಾಗುವ ನಿರೀಕ್ಷೆಯಿದೆ.

ಡಾ|| ಯು. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೇ, ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಶ್ರೀ ದೇಶಪಾಂಡೆಯವರು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಆಗಿದ್ದಾರೆ. ಅವರು ಜಿಲ್ಲೆಗೆ ಬೃಹತ್ ಕೈಗಾರಿಕೆಗಳನ್ನು ತರದೇ ಇದುದ್ದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಇದರ ಜೊತೆಗೆ ನಾನು ಕೇಳಬೇಕಾಗಿರುವ ಪ್ರಶ್ನೆಯೆಂದರೆ, ಈ ಕಾಳೀ ಪುನರ್ವಸತಿಯಿಂದ ಹಿಡಿದು ಸೀಬರ್ಡ್ ಕೊಡಸಳ್ಳಿ ಈ ರೀತಿಯ ಎಲ್ಲಾ ಪುನರ್ವಸತಿ ಯೋಜನೆಗಳು ಇನ್ನೂ ಕೂಡ ಪೂರ್ಣವಾಗಿಲ್ಲ. ಈ ಹಿನ್ನಲೆಯಲ್ಲ ನನಗೆ ಅವರಿಂದ ಸ್ಪಷ್ಟ ಭರವಸೆ ಬೇಕು. ಈ ಪುನರ್ವಸತಿ ಯೋಜನೆಗಳು ಪೂರ್ತಿಯಾಗದೆ ಬೃಹತ್ ಕೈಗಾರಿಕೆಗಳನ್ನು ತೆಗೆದುಕೊಂಡು ಬಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಿಸರವನ್ನು ಹಾಳು ಮಾಡುವಂಥದ್ದು ಮತ್ತು ಪುನರ್ವಸತಿಗೆ ತೊಂದರೆ ಕೊಡುವಂಥ ಕೆಲಸ ಸರ್ಕಾರದಿಂದ ಆಗುವುದಿಲ್ಲ ಎಂಬುದರ ಬಗ್ಗೆ ಒಂದು ಭರವಸೆಯನ್ನು ಕೊಡಬೇಕು. ಎರಡನೆಯದಾಗಿ ಇಮೊತ್ತು ನಮ್ಮ ಜಿಲ್ಲೆಯಲ್ಲಿ ಇಂಟರನ್ಯಾಷನಲ್